ಇ) ಬಡವರಿಗೆ ವಿಶೇಷವಾಗಿ ಆಶ್ರಯ ಅಂಬೇಡ್ಕರ್ ಮನೆಗಳನ್ನು ಹಂಚಿಕೆ ಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ಬಂದಿದೆ.

ಆ) ಬಂದಿದೆ.

ಇ) ಈ ಸಾಲಿಗೆ ತುಮಕೂರು ಜಿಲ್ಲೆಗೆ ಆಶ್ರಯ ಯೋಜನೆಯಡಿ 2300 ಮನೆಗಳನ್ನು ಅಂಬೇಡ್ಕರ್ ಯೋಜನೆಯಡಿ 1281 ಮನೆಗಳನ್ನು ನಿರ್ಮಿಸಲು ಗುರಿ ನಿಗಧಿಪಡಿಸಲಾಗಿದೆ.

ಉಳ್ಳಾಲ ಕ್ಷೇತ್ರದಲ್ಲಿ ಖಾಸಗೀ ಬಸ್‌ಗಳಿಗೆ ಪರವಾನಗಿ.

2769: (3833)

ಶ್ರೀ ಕೆ.ಜಯರಾಂ ಶೆಟ್ಟಿ (ಉಳ್ಳಾಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗೀ ಬಸ್ಸುಗಳಿಗೆ ಅಂತರರಾಜ್ಯ ಓಡಾಟದ ಪರವಾನಗಿ ನೀಡಲು ಅನುಸರಿಸಬೇಕಾದ ಕ್ರಮಗಳು ಯಾವುವು?

ಆ) ಉಳ್ಳಾಲ ವಿದಾನಸಭಾ ಕ್ಷೇತ್ರದ 'ನೆತ್ತಿಲಪಡವು' ಎಂಬ ಪ್ರದೇಶವು ಕೇರಳ ಮತ್ತು ಕರ್ನಾಟಕ ಗಡಿಯಲ್ಲಿರುವುದು ಹಳ್ಳಿ ಪ್ರದೇಶವಾಗಿದ್ದು, ಇಲ್ಲಿಗೆ ಖಾಸಗಿ ಬಸ್ಸುಗಳ ಓಡಾಟಕ್ಕೆ ಅನುಮತಿ ನೀಡಲಾಗಿದೆಯೇ?

ಇ) ಹಾಗಿದ್ದಲ್ಲಿ ಎಷ್ಟು ಬಸ್ಸುಗಳಿಗೆ ಪರವಾನಗಿ ನೀಡಲಾಗಿದೆ; ಪರವಾನಗಿ ನೀಡಿದ ಬಸ್ಸುಗಳು ಈ ಪ್ರದೇಶಕ್ಕೆ ಬಾರದೆ ಇದ್ದು, ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಈ ಪರವಾನಗಿ ಮುಖಾಂತರ ಓಡಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಇಂತಹ 500ಕ್ಕೂ ಹೆಚ್ಚು ಬಸ್ಸುಗಳಿಗೆ ಅಕ್ರಮ ಪರವಾನಗಿ ನೀಡಿ ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಖಾಸಗಿ ಬಸ್ಸುಗಳು ಅಂತರರಾಜ್ಯ ಓಡಾಟದ ಪರವಾನಿಗೆಯನ್ನು 1988ನೇ ಮೋಟಾರು ವಾಹನ ಕಾಯಿದೆಯ ಪ್ರಕರಣ 71, 72 ಹಾಗೂ 1989ನೇ ಕರ್ನಾಟಕ ಮೋಟಾರು ವಾಹನಗಳ ನಿಯಮದ ನಿಯಮ 62ನ್ನು ಪಾಲಿಸಿ ಮಂಜೂರಾತಿ ನೀಡಲಾಗುತ್ತದೆ.

ಆ) ನೀಡಲಾಗಿದೆ.

ಇ) ಈವರೆಗೆ 140 ರಹದಾರಿಗಳನ್ನು ನೀಡಲಾಗಿದೆ. ಪರವಾನಿಗೆ ಪಡೆದ ಬಸ್ಸುಗಳು ಈ ಮಾರ್ಗವನ್ನು ಹೊರತುಪಡಿಸಿ ಬೇರೆ ಬೇರೆ ಜಿಲ್ಲೆಗಳಲ್ಲಿ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಈವರೆಗೆ 140 ಪರವಾನಿಗೆಗಳನ್ನು ನೀಡಲಾಗಿರುತ್ತದೆ. ಪರವಾನಿಗೆ ಮಂಜೂರಾತಿಯಲ್ಲಿ ಯಾವುದೇ ಆಕ್ರಮ ವ್ಯವಹಾರಗಳು ನಡೆದಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ

ಸುರತ್ಕಲ್ ಮತ ಕ್ಷೇತ್ರದಲ್ಲಿ ಜನಸಂಪರ್ಕ ಸಭೆಗಳ ನಿರ್ವಹಣೆ.

2774: (3830)

ಶ್ರೀ ಕುಂಬ್ಳೆ ಸುಂದರ ರಾವ್ (ಸುರತ್ಕಲ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಾಸಕರ ಅಧ್ಯಕ್ಷತೆಯಲ್ಲಿ ಜನಸಂಪರ್ಕ ಸಭೆ ನಡೆಸಿ ಜನರ ಸಮಸ್ಯೆಗಳನ್ನು ಇತ್ಯರ್ಥಗೊಳಿಸಬೇಕೆಂಬ ಸರ್ಕಾರದ ಆದೇಶ ಎಂದಿನಿಂದ ಜಾರಿಗೆ ಬಂದಿದೆ?

ಆ) ಸೂರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಇದುವರೆಗೆ ನಡೆದ ಸಭೆಗಳೆಷ್ಟು? ಇತ್ಯರ್ಥವಾದ ಹಾಗೂ ಇತ್ಯರ್ಥವಾಗದ ಪ್ರಕರಣಗಳೆಷ್ಟು? (ವಿವರ ಒದಗಿಸುವುದು)

ಇ) ಜನಸಂಪರ್ಕ ಸಭೆಗೆ ಹಾಜರಾಗದ ಅಧಿಕಾರಿಗಳು ಯಾರು? (ಸುರತ್ಕಲ್ ಕ್ಷೇತ್ರದಲ್ಲಿ) ಅದಕ್ಕೆ ಕಾರಣಗಳೇನು? ಹಾಗೂ ಅವರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):